# ಪಶ್ಚಿಮ ಘಟ್ಟಗಳನ್ನು ಉಳಿಸಿ | ಒಂದು ನೆನಪು

ಉಮಾಶಂಕರ ಪೆರಿಯೋಡಿ

ಕರಾವಳಿ ಕರ್ನಾಟಕದಲ್ಲಿ ನಡೆದ ಅತ್ಯಂತ ಪ್ರಬಲ ಹೋರಾಟಗಳಲ್ಲಿ 1985ರ ಪಶ್ಚಿಮ ಘಟ್ಟ ಉಳಿಸಿ ಜಾಥಾವು[i] ಸಹ ಒಂದಾಗಿದೆ. ಪಶ್ಚಿಮ ಘಟ್ಟಗಳ ದುರವಸ್ಥೆಯ ಬಗ್ಗೆ ಸುದ್ದಿಪತ್ರಿಕೆಗಳಲ್ಲಿ ಅನೇಕ ವರದಿಗಳು ಪ್ರಕಟವಾಗುವುದರೊಂದಿಗೆ 1984ರ ಮೊದಲೇ ಇವುಗಳನ್ನು ಉಳಿಸುವ ಕುರಿತು ದೊಡ್ಡ ಕೂಗು ಎದ್ದಿತು. ಅದರೊಂದಿಗೆ ಸಾಕಷ್ಟು ಚರ್ಚೆಗಳು ನಡೆದವು. ಇಂತಹ ದುರಂತ ಸನ್ನಿವೇಶ ಕುರಿತು ಚರ್ಚಿಸಲು ಕೆಲವು ಸಮಾನ ಮನಸ್ಕ ವ್ಯಕ್ತಿಗಳು ಜೊತೆ ಸೇರಿದೆವು. ದುರಂತದತ್ತ ಬೆರಳು ತೋರಿಸುವುದು ಸುಲಭ. ಆದರೆ ಅಂತಹ ಸನ್ನಿವೇಶವನ್ನು ಎದುರಿಸಲು ಕಷ್ಟಕರವಾದರೂ ಅತ್ಯಂತ ರಚನಾತ್ಮಕ ಹಾಗೂ ದೃಢವಾದ ಕ್ರಮಗಳನ್ನು ಸೂಚಿಸಬೇಕು ಎಂದು ನಾವು ಅಂದುಕೊಂಡೆವು. ಪಶ್ಚಿಮ ಘಟ್ಟಗಳ ಕುರಿತು ಜಾಗೃತಿ ರೂಪಿಸುವ ಅಗತ್ಯವಿದ್ದು, ಇದರ ಜೀವವೈವಿಧ್ಯತೆಯನ್ನು ರಕ್ಷಿಸಲು ನಾವೇನು ಮಾಡಬೇಕು ಎನ್ನುವುದರ ಕುರಿತು ಚರ್ಚೆ ನಡೆಸಿ ಈ ಪ್ರದೇಶದ ಜನರ ಸಬಲೀಕರಣ ಮಾಡಬೇಕು ಎಂಬುದಾಗಿ ನಾವು ನಿರ್ಣಯಿಸಿದೆವು. ಜೀವವೈವಿಧ್ಯತೆಯ ಪ್ರಾಮುಖ್ಯತೆ ಮತ್ತು ಪರಿಸರ ವಿಜ್ಞಾನದಲ್ಲಿ ಇದರ ಮಹತ್ವ ಹಾಗೂ ಈ ಸಮೃದ್ಧ ಪರಿಸರ ವ್ಯವಸ್ಥೆಯ ಉಳಿವಿನ ಕುರಿತು ನಾವು ಸಾಕಷ್ಟು ಮಾಹಿತಿಯನ್ನು ನೀಡಬೇಕು ಎಂದು ನಿರ್ಧರಿಸಿದೆವು. ಈ ಪ್ರದೇಶದ ಜೀವವೈವಿಧ್ಯತೆಯ ನಾಶವನ್ನು ತಡೆಯುವುದಕ್ಕಾಗಿ ಪ್ರತಿಯೊಬ್ಬರೂ ತೆಗೆದುಕೊಳ್ಳಬಹುದಾದ ಸಣ್ಣ ಕ್ರಮಗಳನ್ನು ಸೂಚಿಸುವುದು ಅತ್ಯಂತ ಪ್ರಮುಖವಾದದ್ದು.

ನಮ್ಮ ಯೋಜನೆಯು ಸರಳವಾಗಿತ್ತು: ಸಂಪಾಜೆಯಿಂದ ಜಾಥಾವನ್ನು ಪ್ರಾರಂಭಿಸುವುದು ಹಾಗೂ ಮಂಗಳೂರಿಗೆ ಹೋಗಿ ಅಲ್ಲಿಂದ ಕುಂದಾಪುರಕ್ಕೆ ತಲುಪುವುದು. ಜನರ ಗುಂಪುಗಳನ್ನು ಭೇಟಿ ಮಾಡಿ ಅವರೊಂದಿಗೆ ಮಾತನಾಡುವುದು ಹಾಗೂ ಅವರಿಗೆ ಮನವರಿಕೆ ಮಾಡಿಕೊಟ್ಟು ಮುಂದೆ ಸಾಗುವುದು. ಇದರ ಮುಖ್ಯ ಭಾಗವೆಂದರೆ, ಪೂರ್ವನಿಯೋಜಿತವಲ್ಲದೆ, ಸಹಜ ರೀತಿಯಲ್ಲಿ, ಜನರು ಎಲ್ಲಿ ಸೇರಿರುತ್ತಾರೋ ಅಲ್ಲೇ ಅವರನ್ನು ಭೇಟಿಯಾಗುವುದು. ಶಿಕ್ಷಕರು, ಗ್ರಾಮ ಪಂಚಾಯಿತಿ ಸದಸ್ಯರು, ಸಮುದಾಯ ಆಧಾರಿತ ಸಂಘಟನೆಗಳು, ನಾಯಕರು ಮತ್ತು ಅಭಿಪ್ರಾಯ ರೂಪಿಸುವವರು, ಯುವಕ ಸಂಘಗಳು, ಶಾಲಾ ಮಕ್ಕಳು ಮತ್ತು ಸ್ವ-ಸಹಾಯ ಸಂಘಗಳೊಂದಿಗೆ ನಾವು ಸಭೆಯನ್ನು ನಡೆಸಿದೆವು.

## ಯೋಜನೆ

ಜನರನ್ನು ತಲುಪಲು, ಅವರಿಗೆ ಮನವರಿಕೆ ಮಾಡಿಕೊಡಲು ನಾವು ಬೀದಿ ನಾಟಕಗಳು, ಗೊಂಬೆಯಾಟಗಳು ಮತ್ತು ಹಾಡುಗಳನ್ನು ಹಾಡಲು ಯೋಜನೆ ರೂಪಿಸಿದೆವು. ಶಶಿಧರ ಅಡಪ[ii] ಅವರು ವಿನ್ಯಾಸಗೊಳಿಸಿದ ಅತ್ಯಂತ ವರ್ಣಮಯ ಮತ್ತು ಸೃಜನಶೀಲ ಎನಿಸಿದ ಎಂಟು ಅಡಿ ಎತ್ತರದ ಗೊಂಬೆಗಳಿದ್ದವು. ವಿವಿಧ ಪಾತ್ರಗಳೊಂದಿಗೆ ನಾವು ಕಥೆಗಳನ್ನು ರಚಿಸಲು ಸಾಧ್ಯವಾಗುವಂತೆ ಅವರು ಅನೇಕ ಗೊಂಬೆಗಳನ್ನು ರಚಿಸಿದ್ದರು.

ವಿವಿಧ ಗೊಂಬೆಯಾಟಗಳನ್ನು ರಚಿಸುವುದಕ್ಕಾಗಿ ನಾವು ಒಂದು ತಿಂಗಳ ಕಾಲ ಯೋಜನೆ ರೂಪಿಸಿ ಕೆಲಸ ಮಾಡಿದೆವು. ಅಲ್ಪ ಸಮಯದ ಹಾಗೂ ಅತ್ಯಂತ ಶಕ್ತಿಶಾಲಿ ಎನಿಸಿದ ಈ ಆಟವು, ಜೀವವೈವಿಧ್ಯವು ಏಕೆ ಪ್ರಮುಖವಾದುದು, ಇದನ್ನು ನಾಶಪಡಿಸಿದರೆ ಅದು ಹೇಗೆ ಇಡೀ ವಿಶ್ವವನ್ನೇ ನಾಶಪಡಿಸ-ಬಹುದು ಎಂಬ ವಿಚಾರವನ್ನು ಅತ್ಯಂತ ಸ್ಪಷ್ಟವಾಗಿ ವಿಶದಪಡಿಸಿತು. ಇದು 'ಜೀವವೈವಿಧ್ಯತೆಯನ್ನು ಉಳಿಸಿ, ಕಾಡುಗಳನ್ನು ಉಳಿಸಿ ಮತ್ತು ಹೆಚ್ಚು ಮರಗಳನ್ನು ಬೆಳೆಸಿ' ಎಂಬ ಸಂದೇಶದೊಂದಿಗೆ ಮುಕ್ತಾಯಗೊಂಡಿತು. ಈ ಜಗತ್ತಿನಲ್ಲಿ ಪ್ಲಾಸ್ಟಿಕ್‌ಉಂಟು ಮಾಡಿರುವ ವಿನಾಶ, ಸಾವಿರಾರು ವರ್ಷಗಳ ಕಾಲವೂ ಅದು ಹೇಗೆ ವಿಘಟನೆಗೊಳ್ಳುವುದಿಲ್ಲ ಮತ್ತು ಮಣ್ಣಿಗೆ ನೀರು ಸೇರುವುದನ್ನು ಹಾಗೂ ಅಂತರ್ಜಲದ ಮರುಪೂರಣವನ್ನು ಅದು ಹೇಗೆ ತಡೆಯುತ್ತದೆ ಎನ್ನುವ ಕುರಿತು ಒಂದು ಕಾರ್ಯಕ್ರಮವಿತ್ತು. ಯಾವುದೇ ರೂಪದಲ್ಲಿ ಪ್ಲಾಸ್ಟಿಕ್ಬಳಸದಿರಲು ಹಾಗೂ ಬಳಸಲೇಬೇಕಾದ ಅನಿವಾರ್ಯತೆ ಆದಾಗ ಅದನ್ನೇ ಮರುಬಳಕೆ ಮಾಡಿ ಉಪಯೋಗಿಸುವುದಕ್ಕೆ ಒತ್ತು ನೀಡಲಾಯಿತು. ಪ್ಲಾಸ್ಟಿಕ್‌ಅನ್ನು ಸುಡುವುದು ಉತ್ತಮ ಪರಿಹಾರವೆಂದು ಭಾವಿಸಿ ಹಳ್ಳಿಯ ಜನರು ಆ ರೀತಿ ಮಾಡುವುದನ್ನು ನಾವು ಅನೇಕ ಬಾರಿ ನೋಡಿದ್ದೇವೆ. ಪ್ಲಾಸ್ಟಿಕ್‌ಅನ್ನು ಸುಟ್ಟರೆ ಅದು ಪರಿಸರ ಮಾಲಿನ್ಯವನ್ನುಂಟು ಮಾಡುತ್ತದೆ ಹಾಗೂ ನಮಗೆ ಹಾನಿಯನ್ನುಂಟು ಮಾಡುತ್ತದೆ ಎಂಬ ಸಂದೇಶವನ್ನು ಈ ಗೊಂಬೆಗಳು ಅತ್ಯಂತ ಸ್ಪಷ್ಟವಾಗಿ ಮತ್ತು ಪ್ರಬಲವಾಗಿ ಸಾರಿದವು.


ನಾವು ಜಲಚಕ್ರದ ಬಗ್ಗೆ ಮತ್ತೊಂದು ಕಥೆಯನ್ನು ಹೆಣೆದೆವು. ಸಮುದ್ರದ ನೀರಿನ ತಾಪಮಾನದ ಮೂಲಕ ಹೇಗೆ ನೀರನ್ನು ತುಂಬಿಕೊಂಡ ಮೋಡಗಳು ರೂಪುಗೊಳ್ಳುತ್ತವೆ, ಹೀಗೆ ರೂಪುಗೊಂಡ ಮೋಡಗಳು ಹೇಗೆ ಭೂಪ್ರದೇಶದತ್ತ

ಸಂಚರಿಸುತ್ತವೆ ಮತ್ತು ನಾವು ಮಳೆಯಿಂದ ನೀರು ಪಡೆಯುವಂತಾಗಲು ಮರಗಳು/ ಕಾಡುಗಳು ಅವುಗಳನ್ನು ಹೇಗೆ ತಡೆಯುತ್ತವೆ ಎಂಬುದನ್ನು ಇದು ವಿವರಿಸಿತು. ಮಳೆ ಮತ್ತು ಮಳೆ ನೀರನ್ನು ಹೇಗೆ ಸಂಗ್ರಹಿಸಲಾಗುತ್ತದೆ ಹಾಗೂ ತೊರೆಗಳು ಮತ್ತು ನದಿಗಳ ಮೂಲಕ ಇದು ಸಮುದ್ರಕ್ಕೆ ಹೇಗೆ ಹೋಗುತ್ತದೆ ಎಂಬುದರ ಕುರಿತು ನಾವು ಮಾತನಾಡಿದೆವು. ಇಲ್ಲಿ ನಾವು ಜಲ ಚಕ್ರದಲ್ಲಿ ಕಾಡುಗಳ ಪ್ರಾಮುಖ್ಯತೆಗೆ ಒತ್ತು ನೀಡಿದೆವು.

ನಾವು ರಚಿಸಿದ ಇನ್ನೊಂದು ಕಥೆಯು ಗ್ರಹಣಗಳಿಗೆ ಸಂಬಂಧಿಸಿತ್ತು. ಚೆಂಡುಗಳು ಮತ್ತು ಟಾರ್ಚ್‌ಲೈಟ್‌ಗಳನ್ನು ಬಳಸಿ, ಗ್ರಹಣಗಳು ಹೇಗೆ ಉಂಟಾಗುತ್ತವೆ ಎಂಬುದನ್ನು ನಾವು ತೋರಿಸಿದೆವು. ಇದನ್ನು ಒಂದು ಕಥೆಯ ಮೂಲಕ ವಿವರಿಸಲಾಯಿತು. ಈ ಕತೆಯಲ್ಲಿ ಕೆಲ ಮಕ್ಕಳು ಮತ್ತು ಅವರ ಅಜ್ಜಿಯ ಪಾತ್ರಗಳಿದ್ದವು. ಈ ಕಥೆಗಳಲ್ಲದೆ ನೀರಿನ ಕೊಯ್ಲು, ನೀರಿನ ಸೂಕ್ತ ಬಳಕೆ ಮತ್ತು ಇತರ ನೈಸರ್ಗಿಕ ಸಂಪನ್ಮೂಲಗಳ ಕುರಿತು ನಾವು ಮಾತನಾಡಿದೆವು.

## ಕೆಲವು ವಿಶೇಷ ನೆನಪುಗಳು

ನಮ್ಮ ಐದನೇ ಪ್ರದರ್ಶನವು ಸಂಪಾಜೆ ಹತ್ತಿರದ ಸಣ್ಣ ಪಂಚಾಯಿತಿಯಲ್ಲಿತ್ತು. ತಮ್ಮ ಗ್ರಾಮದ ಸಮುದಾಯದೊಂದಿಗೆ ಹಾಜರಾಗಿದ್ದ ಪಂಚಾಯಿತಿ ಸದಸ್ಯರು ಈ ಪ್ರದರ್ಶನವನ್ನು ಆಯೋಜಿಸಿದ್ದರು. ಕಿರು ಪರಿಚಯದ ನಂತರ ಕೆಲವು ನಾಯಕರು ಮಾತನಾಡಿದರು. ತದನಂತರ ನಾವು ಪರಿಸರ ವ್ಯವಸ್ಥೆ ಮತ್ತು ಸಮಾಜದ ಮೇಲೆ ಪ್ಲಾಸ್ಟಿಕ್‌ಉಂಟುಮಾಡುವ ವಿನಾಶಕಾರಿ ಪರಿಣಾಮದ ಕುರಿತು ಗೊಂಬೆಯಾಟದ ಪ್ರದರ್ಶನ ನೀಡಿದೆವು. ಭೂಮಿಯಲ್ಲಿ ವಿಪರೀತ ಪ್ಲಾಸ್ಟಿಕ್‌ಇದ್ದರೆ ಏನಾಗುತ್ತದೆ, ಇದು ವಿಘಟನೆಯಾಗದೆ ನೀರು ಭೂಮಿಯ ಒಳಕ್ಕೆ ಜಿನುಗದಂತೆ ತಡೆಯುತ್ತದೆ, ಮಣ್ಣಿನ ಚಯಾಪಚಯ ಕ್ರಿಯೆಯು ನಿಂತು ಹೋಗುತ್ತದೆ ಹಾಗೂ ಭೂಮಿಯಲ್ಲಿ ಫಲವತ್ತತೆ ಬಾರದೆ ಏನೂ ಬೆಳೆಯದು ಇತ್ಯಾದಿ ವಿಚಾರಗಳನ್ನು ಗೊಂಬೆಯಾಟವು ವಿಸ್ತಾರವಾಗಿ ಪ್ರಸ್ತುತಪಡಿಸಿತು.



ಪಶ್ಚಿಮ ಘಟ್ಟವು ತಮಿಳುನಾಡಿನಿಂದ ಹಿಡಿದು ಕೇರಳ, ಕರ್ನಾಟಕ ಮತ್ತು ಗೋವಾದ ಮೂಲಕ ಮಹಾರಾಷ್ಟ್ರದ ತನಕ ಹಬ್ಬಿರುವ ಭಾರತ ಉಪಖಂಡದ ಪಶ್ಚಿಮ ಕರಾವಳಿಯಲ್ಲಿರುವ ಪರ್ವತ ಶ್ರೇಣಿಯಾಗಿದೆ. ತನ್ನ ನೈಸರ್ಗಿಕ ಸೌಂದರ್ಯಕ್ಕೆ ಹೆಸರಾಗಿರುವ ಈ ಪ್ರದೇಶವು ವಿಶ್ವದ ಅಗ್ರ ಎಂಟು ಜೀವವೈವಿಧ್ಯ ತಾಣಗಳಲ್ಲಿ ಒಂದಾಗಿದೆ ಹಾಗೂ ಜಾಗತಿಕವಾಗಿ ಅಳಿವಿನಂಚಿನಲ್ಲಿರುವ ಸುಮಾರು ೩೦೦ಕ್ಕೂ ಹೆಚ್ಚು ಸಸ್ಯವರ್ಗ, ಪ್ರಾಣಿಸಂಕುಲ, ಪಕ್ಷಿಗಳು, ಉಭಯಚರಗಳು, ಸರೀಸೃಪಗಳು ಮತ್ತು ಮೀನಿನ ಪ್ರಭೇದಗಳಿಗೆ ಆಶ್ರಯತಾಣವಾಗಿದೆ.

ಅದರಿಂದ ಭೂಮಿಯು ಸಂಪೂರ್ಣವಾಗಿ ಅನುಪಯುಕ್ತ–ವೆನಿಸುತ್ತದೆ. ಪ್ರದರ್ಶನದ ನಂತರ ಅನೇಕ ಪ್ರಶ್ನೆಗಳು ತೂರಿಬಂದವು ಮತ್ತು ನಾವು ಅವುಗಳಿಗೆ ಉತ್ತರಿಸಿದೆವು. ಅಲ್ಲಿ ನೆರೆದಿದ್ದ ಜನರು ಪ್ಲಾಸ್ಟಿಕ್‌ಅನ್ನು ಹೆಕ್ಕಲು ಹಾಗೂ ಭವಿಷ್ಯದಲ್ಲಿ ಅದನ್ನು ಬಳಸದೆ ಇರಲು ನಿರ್ಧರಿಸಿದರು. ಹದಿನೈದು ವರ್ಷಗಳ ನಂತರ ನನಗೆ ಆ ಗ್ರಾಮಕ್ಕೆ ಭೇಟಿ ನೀಡುವ ಅವಕಾಶ ದೊರೆಯಿತು. ವಿಶೇಷವೆಂದರೆ ಆ ಗ್ರಾಮವು ಇಂದಿಗೂ ಪ್ಲಾಸ್ಟಿಕ್ ಮುಕ್ತ ಗ್ರಾಮವಾಗಿ ಉಳಿದಿದೆ. ಅವರು ಪ್ಲಾಸ್ಟಿಕ್‌ಅನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸುತ್ತಿದ್ದಾರೆ. ಪ್ಲಾಸ್ಟಿಕ್ ಅಪಾಯದ ಬಗ್ಗೆ ಜನರಿಗೆ ಅರಿವಿದೆ ಹಾಗೂ ಅವರು ಅದನ್ನು ಬಳಸುವುದಿಲ್ಲ. ಗ್ರಾಮಕ್ಕೆ ಬರುವ ಪ್ಲಾಸ್ಟಿಕ್‌ಅನ್ನು ಒಂದು ಸ್ಥಳದಲ್ಲಿ ಹಾಕಲಾಗುತ್ತದೆ ಮತ್ತು ಪಂಚಾಯಿತಿ ಇದನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ವಿಲೇವಾರಿ ಮಾಡುತ್ತದೆ. ಇನ್ನೊಂದು ನೆನಪು, ಸಾಮಾನ್ಯವಾಗಿ ಕರಾವಳಿ ಪ್ರದೇಶದಲ್ಲಿ, ಅಸಹಜವಾಗಿ ಬರಡು ನೆಲದಲ್ಲಿ ಕಟ್ಟಿದ್ದ ಸಣ್ಣದೊಂದು ಶಾಲೆಯದು. ಸಾಮಾನ್ಯವಾಗಿ ಕರಾವಳಿ ಪ್ರದೇಶದಲ್ಲಿರುವಂತೆ ಆ ಪ್ರದೇಶದಲ್ಲಿ ಶಾಲೆಯ ಸುತ್ತಮುತ್ತ ಸಾಕಷ್ಟು ಗಿಡಮರಗಳು ಕಾಣಲು ಸಿಗುತ್ತವೆ. ಆದರೆ ಈ ಶಾಲೆಗೆ ಆವರಣ ಗೋಡೆ ಇರಲಿಲ್ಲ ಹಾಗೂ ಯಾವುದೇ ಗಿಡಮರಗಳಿಲ್ಲದೆ ಆವರಣವು ಅಸ್ತವ್ಯಸ್ತವಾಗಿ ಕಾಣುತ್ತಿತ್ತು. ಇಲ್ಲಿ ನಾವು ಎರಡು ಪ್ರದರ್ಶನಗಳನ್ನು ನೀಡಿದೆವು. ಮೊದಲನೆಯದ್ದು ಜಲಚಕ್ರಕ್ಕೆ ಸಂಬಂಧಿಸಿದ್ದರೆ ಎರಡನೆಯದ್ದು ಮರಗಳ ಪ್ರಾಮುಖ್ಯತೆಗೆ ಸಂಬಂಧಿಸಿತ್ತು. ಇಲ್ಲಿನ ಮಕ್ಕಳು ಬಹಳ ಚುರುಕಾಗಿದ್ದರು, ಅವರು ಅನೇಕ ಪ್ರಶ್ನೆಗಳನ್ನು ಕೇಳಿದರು. ಇದು 5 ಸೆಂಟ್ಸ್‌ಮನೆಗಳು ಎಂದು ಕರೆಯಲ್ಪಡುವ ಸಣ್ಣ ವಾಸಸ್ಥಳವಾಗಿತ್ತು. ಈ ಭೂಮಿಯನ್ನು ಬಡ ಭೂರಹಿತ ಜನರಿಗೆ ತಮ್ಮ ಮನೆಗಳನ್ನು ನಿರ್ಮಿಸಲು ನೀಡಲಾಗಿತ್ತು. ಸಾಮಾನ್ಯವಾಗಿ ಇದು ಗ್ರಾಮದ ಕೇಂದ್ರಭಾಗದಿಂದ ದೂರದಲ್ಲಿರುತ್ತದೆ ಹಾಗೂ ಬರಡು ಭೂಮಿಯಾಗಿರುತ್ತದೆ. ಇಂತಹ ಸ್ಥಳದಲ್ಲಿ, ಈ ಸೀಮಿತ ಸಂಪನ್ಮೂಲಗಳೊಂದಿಗೆ ಶಾಲೆಯ ಸುತ್ತ ಹಸಿರು ಕಂಗೊಳಿಸುವಂತೆ ನಾವೇನು ಮಾಡಲು ಸಾಧ್ಯ ಎಂಬುದು ನಮ್ಮೆದುರಿನ ಸವಾಲಾಗಿತ್ತು. ಶಿಕ್ಷಕರು ಸಹ ಇದರಲ್ಲಿ ತೊಡಗಿಕೊಂಡರು ಮತ್ತು ಶಾಲೆಯ ಸುತ್ತ ಮರಗಿಡಗಳನ್ನು ಬೆಳೆಸಲು ನಿರ್ಧರಿಸಿದರು. ಆ ವೇಳೆಗೆ ಅಲ್ಲಿ ವಾಸಿಸುತ್ತಿದ್ದ ಜನರು ಸಹ ಜೊತೆ ಸೇರಿದರು ಹಾಗೂ ಆ ಶಾಲೆ ಮತ್ತು ವಾಸಸ್ಥಳದ ಸುತ್ತ ಹಸಿರು ಕಂಗೊಳಿಸುವಂತೆ ಮಾಡುವುದಾಗಿ ಹೇಳಿದರು. ಇದು ಇಲ್ಲಿನ ನಿವಾಸಿಗಳಿಗೆ ಎಲ್ಲಾದರೂ ಸರಿ ಹೋಗಿ, ಗಿಡಗಳನ್ನು ತರಲು ಉತ್ತೇಜಿಸಿತು. ಅವರು ಪಕ್ಕದ ನರ್ಸರಿಯಿಂದ ಉಚಿತವಾಗಿ ಸಸಿಗಳನ್ನು ತಂದು ಅವುಗಳನ್ನು ನೆಡಲು ಪ್ರಾರಂಭಿಸಿದರು. ಇಂದು ಆ ಶಾಲೆಯು ತನ್ನ ಸುತ್ತಮುತ್ತ ದೊಡ್ಡದಾದ ಸದೃಢ ಮರಗಳೊಂದಿಗೆ ಸುಂದರ ಆವರಣ ಗೋಡೆಯನ್ನು ಹೊಂದಿದೆ. ಇದು ಕೇವಲ ಶಾಲೆಗೆ ಸೀಮಿತವಾಗಿಲ್ಲ. ಈಗ ಇಡೀ ವಾಸಸ್ಥಳವೇ ಹಚ್ಚ ಹಸಿರಿನಿಂದ ಕಂಗೊಳಿಸುತ್ತಿದೆ. ಬಂಟ್ವಾಳ ಪಕ್ಕದ ಶಾಲೆಯೊಂದರಲ್ಲಿ ನಾವು ಗ್ರಹಣದ ಕುರಿತ ಪ್ರದರ್ಶನವನ್ನು ನೀಡಿದ್ದೆವು. ಇದು ಅತ್ಯಂತ ಸವಾಲಿನ ಕೆಲಸವಾಗಿತ್ತು. ಏಕೆಂದರೆ ಬೆಳಕು ಮತ್ತು ನೆರಳಿನ ಹಿನ್ನೆಲೆ ಇದಕ್ಕೆ ಬೇಕಾಗಿತ್ತು ಹಾಗೂ ಈ ಆಟವನ್ನು ಪ್ರದರ್ಶಿಸಲು ಸಂಪೂರ್ಣ ಕತ್ತಲೆ ಬೇಕಾಗಿತ್ತು. ಅರೆ ಪಟ್ಟಣ ಪ್ರದೇಶದಲ್ಲಿದ್ದ ಈ ಶಾಲೆಯು ತುಂಬಾ ದೊಡ್ಡದಾಗಿತ್ತು. ಈ ಆಟವನ್ನು ಪ್ರದರ್ಶಿಸಲು ಅಲ್ಲಿನ ವಿಜ್ಞಾನ ಶಿಕ್ಷಕರು ನಮಗೆ ಸಾಕಷ್ಟು ಸಹಾಯ ಮಾಡಿದರು. ಅಷ್ಟರಲ್ಲಿ ನಾವು ಸಾಕಷ್ಟು ಅಭ್ಯಾಸ ನಡೆಸಿದ್ದೆವು ಹಾಗೂ ಪ್ರದರ್ಶನವು ಚೆನ್ನಾಗಿಯೇ ನಡೆಯಿತು. ವಿದ್ಯಾರ್ಥಿಗಳು ಸಾಕಷ್ಟು ಗಂಭೀರ ಪ್ರಶ್ನೆಗಳನ್ನು ಕೇಳುವುದರೊಂದಿಗೆ ಚರ್ಚೆಯು ತೀವ್ರ ಸ್ವರೂಪ ಪಡೆಯಿತು. ಗ್ರಹಣದ ಸಂದರ್ಭದಲ್ಲಿ ಹೊರಗೆ ಹೋಗಿದ್ದ ವ್ಯಕ್ತಿಯೊಬ್ಬ ಸತ್ತು ಹೋಗಿದ್ದ, ಸಾಕಷ್ಟು ಮಹಿಳೆಯರಿಗೆ ಗರ್ಭಪಾತ ಉಂಟಾಯಿತು – ಹೀಗೆ ಅನೇಕ ವಿಚಾರಗಳನ್ನು ವಿದ್ಯಾರ್ಥಿಗಳು ಹೇಳಿದರು. ನಾವು ಸಾಕ್ಷ್ಯಾಧಾರ ಸಮೇತ ಮಾತನಾಡಿದೆವು. ನಾವು ಈ ರೀತಿ ಕೇಳಿದೆವು – ನೀವು ಕೇಳಿರುವ ಸಂಗತಿಗಳನ್ನು ಸ್ವತಃ ನೋಡಿದ್ದೀರಾ? ನಾವು ಆದಷ್ಟು ವೈಜ್ಞಾನಿಕ ಮನೋಭಾವವನ್ನು ಮೂಡಿಸಿಕೊಳ್ಳಬೇಕು, ಸಾಕ್ಷ್ಯಾಧಾರಗಳು, ವಾಸ್ತವಿಕತೆಯ ನೆಲೆಯ ಮೇಲೆ ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಬೇಕು ಮತ್ತು ಸಾಬೀತಾದುದನ್ನು ಮಾತ್ರವೇ ನಂಬಬೇಕು ಎಂಬ ವಿಚಾರವನ್ನು ನಾವು ಪುನರುಚ್ಚರಿಸಿದೆವು. ಚರ್ಚೆಯು ಬಹಳ ಫಲಪ್ರದವಾಗಿತ್ತು ಎಂದು ನಮಗನ್ನಿಸಿತ್ತು.


ಸಾರ್ವಜನಿಕವಾಗಿ ಮತ್ತು ಶಾಲೆಗಳಲ್ಲಿ ನಾವು ಮಾಡಿದ ಪ್ರದರ್ಶನಗಳಿಗೆ ಇವು ಕೆಲವು ಉದಾಹರಣೆಗಳಷ್ಟೇ. ಅನೇಕ ಸ್ಥಳಗಳಲ್ಲಿ ಜನ ಪರಿಸರ ಸಂರಕ್ಷಣೆಗಾಗಿ ಪ್ರತಿಜ್ಞೆ ಮಾಡಿದರು. ಕೆಲವು ಕಡೆ ಜನ ಕೂಡಲೇ ತಮ್ಮ ಪರಿಸರವನ್ನು ಶುಚಿಗೊಳಿಸಲು, ಸಸಿಗಳನ್ನು ನೆಡಲು ಮತ್ತು ಪ್ಲಾಸ್ಟಿಕ್‌ಅನ್ನು ತೆಗೆಯಲು ಕಾರ್ಯಪ್ರವೃತ್ತರಾದರು. ನಮ್ಮ ಪ್ರಕಾರ ಈ ಜಾಥಾದ ಅತ್ಯಂತ ಪ್ರಮುಖ ಅಂಗವೆಂದರೆ ಜನರು ಕೇಳಿದ ಪ್ರಶ್ನೆಗಳು ಮತ್ತು ನಾವು ಅವರ ಸಂದೇಹಗಳನ್ನು ದೂರ ಮಾಡಿದ್ದು. ಈ ಜಾಥಾವು 15 ದಿನಗಳ ತನಕ ನಡೆಯಿತು. ಒಂದು ತಂಡವಾಗಿ ನಾವು ಮಾತುಕತೆ, ಚರ್ಚೆ ಹಾಗೂ ಬದಲಾವಣೆಗಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಸಾಗಿದೆವು. ಎಲ್ಲಾ ಕಡೆಗಳಲ್ಲಿ ಜನರು ನಮ್ಮನ್ನು ಮುಕ್ತವಾಗಿ ಸ್ವಾಗತಿಸಿದರು; ನಮಗೆ ಆಹಾರ ಮತ್ತು ತಂಗಲು ಸ್ಥಳ ನೀಡಿದರು. ನಾವು ಶಾಲೆಗಳು ಮತ್ತು ಪಂಚಾಯಿತಿ ಕಚೇರಿಗಳಲ್ಲಿ ತಂಗುತ್ತಿದ್ದೆವು. ಕೆಲವು ಸಂದರ್ಭಗಳಲ್ಲಿ ನಾವು


ಜನರ ಮನೆಗಳಲ್ಲಿ ತಂಗಿದ್ದೂ ಇದೆ. ಯಾವಾಗಲೂ ನಮ್ಮ ದಾರಿಯು ಸುಗಮವಾಗಿರಲಿಲ್ಲ. ಕೆಲವು ಕಡೆ ನಾವು ಜನರ ವಿರೋಧವನ್ನೂ ಎದುರಿಸಬೇಕಾಗಿತ್ತು. ಉದಾಹರಣೆಗೆ, ದಕ್ಷಿಣಕನ್ನಡದ ಅತ್ಯಂತ ಪ್ರಸಿದ್ಧ ದೇವಸ್ಥಾನವೊಂದರಲ್ಲಿ ನಮಗೆ ಪ್ರದರ್ಶನ ನೀಡಲು ಅವಕಾಶ ನೀಡಲಿಲ್ಲ. ದೇವಸ್ಥಾನದ ಆಡಳಿತ ಮಂಡಳಿಯೊಂದಿಗೆ ನಾವು ಹೋರಾಡಬೇಕಾಯಿತು. ಅವರು ಹಠ ಹಿಡಿದಿದ್ದರು. ಕೊನೆಗೆ ನಾವು ದೇವಸ್ಥಾನದ ಆವರಣದ ಹೊರಗೆ ಪ್ರದರ್ಶನವನ್ನು ನಡೆಸಿದೆವು. ದೇವಸ್ಥಾನಕ್ಕೆ ಬಂದ ಎಲ್ಲಾ ಜನರನ್ನು ಒಗ್ಗೂಡಿಸಿ ಒಂದು ದೊಡ್ಡ ವೃತ್ತವನ್ನು ರಚಿಸಿದೆವು ಹಾಗೂ ತೆರೆದ ಮೈದಾನದಲ್ಲಿ ಪ್ರದರ್ಶನ ನಡೆಸಿದೆವು. ಸಾಕಷ್ಟು ಚರ್ಚೆಗೆ ಅವಕಾಶ ಒದಗಿಸಿದ ಈ ಪ್ರದರ್ಶನವು ಜನರು ಪ್ರತಿಜ್ಞೆಯನ್ನು ಕೈಗೊಳ್ಳುವುದರೊಂದಿಗೆ ಅತ್ಯಂತ ಪರಿಣಾಮಕಾರಿಯಾಗಿ ಹೊರಹೊಮ್ಮಿತು. ಮಾರುಕಟ್ಟೆ ಪ್ರದೇಶಗಳು ಮತ್ತು ಬೀದಿಗಳು ಪ್ರದರ್ಶನ ನೀಡಲು ಅತ್ಯಂತ ಸವಾಲಿನ ಪ್ರದೇಶಗಳಾಗಿದ್ದವು. ಏಕೆಂದರೆ ಇಲ್ಲಿ ಜನ ತಮ್ಮ ದಿನನಿತ್ಯದ ವ್ಯವಹಾರಕ್ಕಾಗಿ ಅತ್ತ ಇತ್ತ ಓಡಾಡುತ್ತಿದ್ದರು. ಅವರನ್ನು ನಿಲ್ಲುವಂತೆ ಮಾಡುವುದು ನಮ್ಮಿಂದ ಸಾಧ್ಯವಿರಲಿಲ್ಲ. ಆದ್ದರಿಂದ ನಾವು ನಮ್ಮ ಧ್ವನಿಯನ್ನು ಏರಿಸಿ ಮಾತಾಡತೊಡಗಿದೆವು, ಆಗ ಅವರು ತಾವು ಮಾಡುತ್ತಿದ್ದ ಕೆಲಸ ಬಿಟ್ಟು ನಮ್ಮನ್ನು ನೋಡತೊಡಗುತ್ತಿದ್ದರು. ಪ್ರದರ್ಶನ ನೀಡಲು ಶಾಲೆಗಳು ಮತ್ತು ಹಳ್ಳಿಗಳು ಅತ್ಯಂತ ಶಾಂತಿಯುತ ಸ್ಥಳಗಳಾಗಿದ್ದವು.

## ಜಾಥಾವನ್ನು ಕಾರ್ಯರೂಪಕ್ಕೆ ತರುವುದು

ಯೋಜನೆ ರೂಪಿಸುವುದು ಮತ್ತು ಪೂರ್ವಸಿದ್ಧತೆಯನ್ನು ಮಾಡಿಕೊಳ್ಳುವುದು ಈ ಜಾಥಾದ ಯಶಸ್ಸಿನ ಹಿಂದಿನ ಪ್ರಮುಖ ಅಂಶಗಳಾಗಿದ್ದವು. ಯೋಜನೆ ರೂಪಿಸಲು ನಮಗೆ ಆರು ತಿಂಗಳುಗಳಿಗಿಂತಲೂ ಹೆಚ್ಚು ಕಾಲ ಬೇಕಾಯಿತು. ಸಾಗಬೇಕಾದ ಮಾರ್ಗವನ್ನು ವಿವರವಾಗಿ ಬಿಡಿಸಲಾಯಿತು. ಜನರನ್ನು ಸಾಕಷ್ಟು ಮುಂಚಿತವಾಗಿಯೇ ಸಂಪರ್ಕಿಸಲಾಯಿತು. ಜಾಥಾಕ್ಕಿಂತ ಮೊದಲು ನಡೆಸಿದ ಚರ್ಚೆಯು ಎಲ್ಲಾ ಕಡೆಗಳಲ್ಲಿ ಸಾಕಷ್ಟು ನೆರವಿಗೆ ಬಂತು. ನಿರ್ದಿಷ್ಟ ಮಾರ್ಗದಲ್ಲಿ ನಾವು ಸಾಗಲು ಸಾಧ್ಯವಿಲ್ಲ ಎಂದು ತಿಳಿದಾಗ ಅದನ್ನು ಬದಲಾಯಿಸಿದೆವು. ಅನೇಕ ತಂಡಗಳು ಏಕಕಾಲದಲ್ಲಿ ಕೆಲಸ ಮಾಡುತ್ತಿದ್ದವು. ಮಾಹಿತಿಯನ್ನು ಕಲೆ ಹಾಕುವುದಕ್ಕಾಗಿ ಹಾಗೂ ಈ ಜಾಥಾದಲ್ಲಿ ಪಾಲ್ಗೊಳ್ಳುವವರೊಂದಿಗೆ ಹಂಚಿಕೊಳ್ಳುವುದಕ್ಕಾಗಿ ಸಂಶೋಧನಾ ತಂಡವು ಸಾಕಷ್ಟು ಪೂರ್ವಭಾವಿ ಕೆಲಸವನ್ನು ಮಾಡಿತು. ಪ್ರದರ್ಶನ ತಂಡವು ನಾಟಕಗಳನ್ನು ರಚಿಸಿತು ಮತ್ತು ನಾಟಕ, ಗೊಂಬೆಯಾಟ ಹಾಗೂ ಹಾಡುಗಳನ್ನು ಹೊಂದಿದ್ದ ಪ್ರದರ್ಶನಗಳನ್ನು ಸಿದ್ಧಪಡಿಸಿತು. ಮೂರು ಪ್ರತ್ಯೇಕ ತಂಡಗಳು ಸಾಕಷ್ಟು ಮುಂಚಿತವಾಗಿ ಅಭ್ಯಾಸ ಮಾಡಿ ಪ್ರದರ್ಶನಗಳನ್ನು ಸಿದ್ಧಪಡಿಸಿದವು. ಪ್ರಚಾರ ತಂಡವು ಮಾಧ್ಯಮಗಳಲ್ಲಿ ಮತ್ತು ಆ ಪ್ರದೇಶದ ಪತ್ರಿಕೆಗಳಲ್ಲಿ ಪ್ರಚಾರ ಪಡೆಯುವುದಕ್ಕಾಗಿ ಕಠಿಣ ಶ್ರಮವಹಿಸಿತು. ಅತ್ಯಂತ ಪ್ರಮುಖವಾದುದೆಂದರೆ, ಬದ್ಧತೆ ಹೊಂದಿದ ಜನರನ್ನು ಸಜ್ಜುಗೊಳಿಸುವುದು – ಪ್ರಧಾನ ತಂಡವು ಅತ್ಯಂತ ಹೆಚ್ಚಿನ ಬದ್ಧತೆ ಹೊಂದಿದ ಜನರನ್ನು ಹೊಂದಿತ್ತು. ಈ ಜಾಥಾದಲ್ಲಿ ಒಳಗೊಂಡಿದ್ದ ಜನರ ಬದ್ಧತೆ ಮತ್ತು ವಿವಿಧ ಗುಂಪುಗಳ ನಡುವಿನ ಸಹಯೋಗದ ಕಾರಣ ಈ ಉಪಕ್ರಮಕ್ಕೆ ಸಾಕಷ್ಟು ಯಶಸ್ಸು ದೊರೆಯಿತು. ಈ ಜಾಥಾವು ನಿಜಕ್ಕೂ ದೊಡ್ಡ ಪ್ರಮಾಣದ ಪರಿಣಾಮ ಬೀರುವಲ್ಲಿ ಯಶಸ್ವಿಯಾಯಿತು. ಇಂದು ಸಹ ನಾವು ಇದರ ಪರಿಣಾಮವನ್ನು ಕಾಣಬಹುದು. ಪ್ಲಾಸ್ಟಿಕ್ ಮುಕ್ತ ಪಂಚಾಯತಿಗಳು, ಸಾರ್ವಜನಿಕ ಸ್ಥಳಗಳಲ್ಲಿ ಮರಗಳನ್ನು ಬೆಳೆಸುವ ಜನರು, ಪರಿಸರಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಯುವಕ ಸಂಘಗಳು ಇಂದು ಕಾಣಸಿಗುತ್ತವೆ. ಪಶ್ಚಿಮ ಘಟ್ಟಗಳನ್ನು ಉಳಿಸಿ ಜಾಥಾವು ಸಾಕಷ್ಟು ಧನಾತ್ಮಕ ಪರಿಣಾಮವನ್ನುಂಟು ಮಾಡಿತು.












**ಬೋಧನಾ ಸಾಧನವಾಗಿ ಗೊಂಬೆಗಳ ಬಳಕೆ.**
**ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ-ಬೋಧಕರೊಂದಿಗೆ ಉಮಾಶಂಕರ ಪೆರಿಯೋಡಿಯವರ ಗೊಂಬೆ ಕಾರ್ಯಾಗಾರ**

**ಕೊನೆ ಟಿಪ್ಪಣಿ**

i. ಜಾಥಾ: ಇದೊಂದು ಸಂಘಟಿತ ಕಾರ್ಯಕ್ರಮವಾಗಿದ್ದು, ಇಲ್ಲಿ ಜನ ಬೀದಿಯಲ್ಲಿ ಹೋಗುತ್ತಾ ಯಾವುದಾದರೂ ಸಂದರ್ಭವನ್ನು ಸಂಭ್ರಮಿಸುತ್ತಾರೆ, ಸಂದೇಶವನ್ನು ಸಾರುತ್ತಾರೆ ಅಥವಾ ಯಾವುದಾದರೂ ವಿಷಯದ ಕುರಿತು ಪ್ರತಿಭಟನೆ ನಡೆಸುತ್ತಾರೆ.

ii. ಶಶಿಧರ ಅಡಪ ಅವರು ಪ್ರಸಿದ್ಧ ಭಾರತೀಯ ಪ್ರೊಡಕ್ಷನ್, ಸೆಟ್ ಮತ್ತು ಗೊಂಬೆ ವಿನ್ಯಾಸಕಾರರಾಗಿದ್ದಾರೆ.

---



**ಉಮಾಶಂಕರ ಪೆರಿಯೋಡಿ** ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಹಿರಿಯ ಸದ್ಯಸರಾಗಿದ್ದಾರೆ. ಅಭಿವೃದ್ಧಿ ಕ್ಷೇತ್ರದಲ್ಲಿ ಇವರಿಗೆ ಮೂವತ್ತು ವರ್ಷಕ್ಕೂ ಹೆಚ್ಚಿನ ಅನುಭವವಿದೆ. ರಾಷ್ಟ್ರೀಯ ಸಾಕ್ಷರತಾ ಅಭಿಯಾನ (National Literacy Campaign) ಮತ್ತು ಕರ್ನಾಟಕದ ಬಿ.ಆರ್. ಹಿಲ್ಸ್‌ನ ಆದಿವಾಸಿ ಶಿಕ್ಷಣಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ. ತಳ ಹಂತದ ಕ್ಷೇತ್ರ ಕಾರ್ಯಕರ್ತರು ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಿಗೆ 'ಬೇರ್ ಫೂಟ್ ರಿಸರ್ಚ್' ಎಂಬ ಹೆಸರಿನಲ್ಲಿ ತರಬೇತಿ ನೀಡುತ್ತಿದ್ದಾರೆ. ಕರ್ನಾಟಕ ರಾಜ್ಯ ತರಬೇತಿದಾರರ ಸಮುಚ್ಚಯದ ಸಂಸ್ಥಾಪಕ ಸದಸ್ಯರು. ಅವರನ್ನು periodi@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಮೆಲ್ವಿನ್ ಮೆಂಡೋನ್ಸಾ** | ಪರಿಶೀಲನೆ: **ನಾಗಮಣಿ ಎಸ್.ಎನ್.**